ಕಥೆ

# ಎಳ್ಳು ನೀರೆಂಬ...



**ಸುರೇಶ ಕಂಜರ್ಪಣೆ**

ಕಲೆ: ರಾಮಕೃಷ್ಣ ಸಿದ್ರಪಾಲ



ಕುಮಾರನ ನೆನಪು ಇವನಿಗೇಕೆ ಬಂತು? ಅಷ್ಟಕ್ಕೂ ಇವನೇನು ಎಲ್ಲೂ ಕಾಣಿಸಿಕೊಂಡದ್ದಿಲ್ಲ. ಮಧುಸೂದನ ಇದ್ದದ್ದೇ ಹಾಗೆ.

ಓದುವಾಗ ಅವನಿಗೊಂದು ವಿಚಿತ್ರ ಹಾಸ್ಯಪ್ರಜ್ಞೆ ಇತ್ತು. ಯಾವ ತಾತ್ವಿಕ ಜಿಜ್ಞಾಸೆಯನ್ನೂ ಚುಚ್ಚಿ ಅದರ ಟೊಳ್ಳುತನ ಬಯಲು ಮಾಡುತ್ತಿದ್ದ.

ಇದೆಲ್ಲಾ ದಶಕಗಳ ಹಿಂದಿನ ಮಾತು.

ಅವನು ಮತ್ತೆ ನನಗೆ ಸಿಕ್ಕಿದ್ದು ಅಚಾನಕವಾಗಿ. ನಾನು ಬಸ್ಸಿಂದಿಳಿದು ನಡೆದು ಹೋಗುತ್ತಿರುವಾಗ ನನ್ನನ್ನು ದಾಟಿಕೊಂಡು ಆ ಟಿವಿಎಸ್ ಹೋಯಿತು. ತಟಕ್ಕನೆ ಆ ಟಿವಿಎಸ್ ತಿರುಗಿ ನನ್ನೆಡೆಗೆ ಬಂದು ನಿಂತಿತು.

‘ಕೇಪಿ...’ ಎಂದು ಕೂಗಿದ್ದೇ ನಾನು ಅವಾಕ್ಕಾಗಿ ನಿಂತೆ.

‘ಗುರುತು ಸಿಗ್ತೇನೋ?’ ಎಂದು ಕೇಳಿದ ಅವನ ಚಹರೆ ಗುರುತಾಗುವ ಮೊದಲೇ ಆಳದಲ್ಲೆಲ್ಲೋ ಮುದ್ರೆ ಹೊಡೆದಿದ್ದ ನೆನಪು ಎದ್ದು ಬಂದು, ‘ಮಧೂ ಅಲ್ವಾ?’ ಎಂದೆ

‘ಹ್ಞೂಂ ಕಣೋ. ಇಲ್ಲೇನು?’ ಎಂದ

ನಾನೇನು ಹೇಳಲಿ? ‘ಈಗ ಇಲ್ಲಿದ್ದೇನೆ’ ಅಂದೆ.

ಅವನೋ ಕೊಂಚ ಚೀಕಲು ಇದ್ದ. ಮೀಸೆ ಪೊಗದಸ್ತಾಗಿ ಬರ್ತಿಲ್ಲ ಅನ್ನೋ ಹಳಹಳಿಕೆಯಲ್ಲಿ ಒದ್ದಾಡುತ್ತಿದ್ದ. ಪುಟ್ಟ ಸಪಾಟು ಅಂಡು ಅವನದ್ದು. ಅಂಗಿ ಇನ್‌ಸರ್ಟ್ ಮಾಡಿದರೆ ಸಪಾಟು ರಟ್ಟಿನ ತರ ಕಾಣುತ್ತಿದ್ದೇನೆ ಎಂಬ ದುಃಖ ಅವನಿಗೆ. ಅದಕ್ಕೇ ಪ್ಯಾಂಟಿನ ಎರಡೂ ಜೋಬಿಗೆ ಮೂರ್ನಾಲ್ಕು ಕರ್ಚೀಫ್ ತುರುಕಿ ಅದು ಉಬ್ಬಿದ ಅಂಡಿನ ತರ ಕಾಣುವ ಹಾಗೆ ಮಾಡುತ್ತಿದ್ದ.

ಅದರಿಂದ ಅವನಿಗೇನೂ ಲಾಭವಾಗಿರಲಿಲ್ಲ. ಯಾವ ಹುಡುಗಿಯೂ ಅವನನ್ನು ಮಾತಾಡಿಸುವುದಿರಲಿ, ನೋಡಿದ್ದೂ ಇಲ್ಲ.

ಅವನಿಗೆ ಅದೇನೂ ದುಃಖ ತಂದಿರಲಿಲ್ಲ ಅನ್ನಿಸುತ್ತೆ. ಆದರೆ ತದೇಕವಾಗಿ, ದಾಟುವ ಪ್ರತಿ ಹುಡುಗಿಯನ್ನೂ ನೋಡುತ್ತಿದ್ದ. ಅವಳ ವಯಸ್ಸು, ಎದೆ ಅಳತೆಯೂ ಹೌದೇನೋ ಎಂಬಂತೆ ಕರಾರುವಾಕ್ಕಾಗಿ ಹೇಳುತ್ತಿದ್ದೇನೆ ಎಂಬಂತೆ ಬೀಗಿ ಹೇಳುತ್ತಿದ್ದ. ನಾವು ಕರುಬುವಷ್ಟು.

ಈಗ ನನ್ನೆದುರು ಪ್ರತ್ಯಕ್ಷವಾದ ಈ ಮಧುಸೂದನ ದಪ್ಪಗಿದ್ದ. ಹೊಟ್ಟೆ ಮುಂದೆ ಬಂದಿತ್ತು. ಹಾಫ್ ಶರ್ಟ್ ಹಾಕಿ